ಅಮ್ಮ, ಅಣ್ಣ, ಬಂಧುಗಳು, ಪರಿಚಿತರು, ನೆರೆಯವರು – ಇವರೆಲ್ಲರೂ ನನಗೆ ಪ್ರಿಯರಾದ ಕಥಾಪಾತ್ರಗಳು. ನನ್ನ ಪುಟ್ಟ ಅನುಭವ ಕಕ್ಷೆಯಲ್ಲಿ ಬಂದ ಸ್ತ್ರೀ, ಪುರುಷರ ಕಥೆಗಳೇ ನನ್ನ ಸಾಹಿತ್ಯದ ಹೆಚ್ಚಿನ ಭಾಗಗಳು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನನ್ನವೇ ಕಥೆಗಳು. ಒಂದು ತಮಾಷೆಯೆಂಬಂತೆ ನನಗೆ ಆಗಾಗ ನೆನಪಾಗುವುದಿದೆ. ಅಮ್ಮ ಬದುಕಿದ್ದಿದ್ದರೆ; ಅಪ್ಪನ ಮನೆಯಿಂದ ಬಂದ ಶಂಕುಣ್ಣಿಯಣ್ಣನನ್ನು ಸತ್ಕರಿಸಲು ನನ್ನನ್ನು ಉಪವಾಸ ಮಲಗಿಸಿದ 'ಕರ್ಕಟಕ' ಕಥೆಯನ್ನು ಓದಿದ್ದರೆ ಏನನ್ನಿಸುತ್ತಿತ್ತು. ವರ್ಷಗಳ ಬಳಿಕ ಒಂದು



ಕಥಾಪಾತ್ರ, ಒಂದು ಘಟನೆ, ಒಂದು ವಾತಾವರಣ ತಕ್ಷಣ ಮನಸ್ಸಿಗೆ ಬರುವಾಗ ಇನ್ನೊಂದು ಸೃಷ್ಟಿಯ ನೋವಿನ ಆರಂಭ ಈ ನಿಮಿಷವೆಂದು ತಿಳಿಯುವಾಗ ಆ ವೇಳೆಗೆ ವಿವರಿಸಲಾಗದ ಒಂದು ತೆರನ ಸಾರ್ಥಕ ಭಾವನೆ ಉಂಟಾಗುತ್ತದೆ. ಆ ಸಾರ್ಥಕತೆಗಾಗಿ ನಿತಾಂತವಾದ ಅಸ್ವಸ್ಥತೆಯನ್ನು ಹೊತ್ತುಕೊಂಡು ನಡೆಯುವಾಗ ಬರಹಗಾರ ನಿರೀಕ್ಷೆಯಿಂದ ಕಾದಿರುತ್ತಾನೆ.'

'ತುಂಬಾ ಹಿಂದಿನ ಕಥೆ. ಅಂದು ಒಂದು ದಿನ ಮನೆಯೊಂದರಲ್ಲಿ ಒಬ್ಬಾಕೆ ಮಹಿಳೆ ಮತ್ತು ಆರು ಜನ ಮಕ್ಕಳು ಮಾತ್ರ ಇದ್ದರು. ಆ ಮಹಿಳೆ ಹಸುವಿನ ಹಾಲು ಕರೆದು ದಿನವೂ ಹಾಲನ್ನು ದೇವಸ್ಥಾನಕ್ಕೆ ಕೊಂಡೊಯ್ದು ಕೊಡುತ್ತಿದ್ದಳು. ದೇವಸ್ಥಾನಕ್ಕೆ ನದಿ ದಾಟಿ ಹೋಗಬೇಕಾಗಿತ್ತು. ದೇವಸ್ಥಾನದಿಂದ ಸಿಗುವ ನೈವೇದ್ಯದಿಂದ ಅವರು ದಿನ ಕಳೆಯುತ್ತಿದ್ದರು. ಅಂದು ಮಳೆಗಾಲದ ನದಿ ತುಂಬಿ ಹರಿಯುತ್ತಿತ್ತು. ದೋಣಿ ದಾಟುವುದೂ ಸಾಧ್ಯವಿರಲಿಲ್ಲ. ನದಿ ದಡದಲ್ಲಿ ಹಾಲಿನ ಪಾತ್ರೆಯೊಂದಿಗೆ ತುಂಬಾ ಹೊತ್ತು ಆ ಮಹಿಳೆ ಕಾದು ಕುಳಿತಳು. ಕೊನೆಗೆ ದುಃಖದಿಂದ ಮಹಿಳೆ ಅಲ್ಲಿಂದ ಮರಳಿದಳು.

ಮಕ್ಕಳಿಗೆ ಅಂದು ಊಟವಿಲ್ಲ. ಮಧ್ಯರಾತ್ರಿಯ ಹೊತ್ತಿಗೆ ಜಗಲಿ ಬಾಗಲಿನೆಡೆಯಿಂದ ಯಾರೋ ಕೂಗಿದರು. ಬಾಗಿಲು ತೆರೆದಾಗ ಒಂದು ಕೈ ಚಾಚಿತು. ಕೈಯಲ್ಲಿ ಅನ್ನ ತುಂಬಿದ ಪಾತ್ರೆಯನ್ನು ನೀಡಿತು.

'ಮಕ್ಕಳಿಗೆ ಎಬ್ಬಿಸಿ ಉಣಿಸು'.

ಮುಸುಕು ಹಾಕಿದ ರೂಪವೊಂದು ಕೋಣೆಯ ಬಾಗಿಲು ತೆರೆದು ಒಳಗೆ ಹೋಗುವುದನ್ನು ಕಂಡಳು. ಕಾಲ್ಗೆಜ್ಜೆಯ ಶಬ್ದವೂ ಕೇಳಿಸಿತು. ಮತ್ತೇನೂ ಕಾಣಿಸಲಿಲ್ಲ. ಅದರ ನಂತರ ಮನೆಯಲ್ಲಿ ಐಶ್ವರ್ಯ ಹೆಚ್ಚಿತು'.

ಅನ್ನ ಕೊಟ್ಟ ತಾಯಿಯೇ ಮನೆಯ ಸುಕೃತಕ್ಕೆ ಕಾರಣವಾಯಿತೆಂಬುದು ಎಂ.ಟಿ.ಯವರ ಕಥೆಗಳಲ್ಲಿ ಮತ್ತೆ ಮತ್ತೆ ಆವರ್ತಿಸಿದ್ದಿದೆ. ಜಗತ್ತಿನಲ್ಲಿರುವ ದೇವರುಗಳನ್ನೆಲ್ಲ ಇಲ್ಲವೆಂದು ಹೇಳಿದರೂ ನನ್ನ ಊರಿನ 'ಕೋಡಿ ಕುನ್ನತ್ತ್ ಕಾವಿಲಮ್ಮ' ಇಲ್ಲ ಎಂದು ಹೇಳಲು ಸಾಧ್ಯವಿಲ್ಲವೆಂದು ಸಮ್ಮೇಳನವೊಂದರಲ್ಲಿ ಎಂ.ಟಿ. ಹೇಳಿದ್ದು ಈ ಕಥೆಯ ಹಿನ್ನೆಲೆಯಲ್ಲಿ.

ಧಾರ್ಮಿಕ ನಂಬಿಕೆಗಳನ್ನು ಹುಸಿಗೊಳಿಸುವಂತೆ ದೇವರ ಖಡ್ಗದಿಂದ ಬಾಲಕ ಮಾವಿನ ಕಾಯಿಯನ್ನು ತುಂಡರಿಸುವುದು, ಹಸಿವೆಯನ್ನು ತಾಳಲಾರದೆ ದರ್ಶನ ಪಾತ್ರಿ ಕೊನೆಗೆ ತಾನೇ ನಂಬಿದ ದೇವರ ಖಡ್ಗ ಹಾಗೂ ಗಗ್ಗರವನ್ನು ಮಾರುವುದು, ಮುಂದೆ ದೇವರ ಮುಖಕ್ಕೆ ಕ್ಯಾಕರಿಸಿ ಉಗುಳುವುದು, ಮನೆಮಂದಿಯ ಹಸಿವು ತಣಿಸಲು ನಾಣು ದೇವರ ದೀಪವನ್ನು ಬಿಕರಿಗೆ ನೀಡುವುದು ಇತ್ಯಾದಿಗಳ ಮೂಲಕ ಪರಂಪರೆಗೆ ಸವಾಲೆಸೆಯುವ ದಿಟ್ಟತನವನ್ನೂ ಎಂ.ಟಿ.ಯವರ ಕಥೆಗಳಲ್ಲಿ, ಸಿನೆಮಾಗಳಲ್ಲಿ ಕಾಣಬಹುದು. ಹೀಗೆ ಪರಂಪರಾಗತ ಸಂಪ್ರದಾಯ ಆಚರಣೆಗಳ ಬಗೆಗೆ ಪ್ರೀತಿ, ಅಲ್ಲಿನ ಪೊಳ್ಳುತನಗಳನ್ನು ಬಯಲು ಮಾಡುವಲ್ಲಿನ ಧಾರ್ಷ್ಟ್ಯ – ಇಲ್ಲೆಲ್ಲ ವೈಚಾರಿಕವಾಗಿ ವೈರುಧ್ಯಗಳನ್ನು ಅನಾವರಣಗೊಳಿಸುವಂತೆಭಾಸವಾದರೂಅದರೊಳಗೆ